ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಹನ್ನೆರಡನೇ ಪಟ್ಟಿಯಲ್ಲಿರುವ 35 ಪ್ರಶ್ನೆಗಳ ಪೈಕಿ 22 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹುಬ್ಬಳ್ಳಿ ಧಾರವಾಡ ನಗರಕ್ಕೆ ಬರಗಾಲ ಪರಿಹಾರ ನಿಧಿಯಿಂದ ಬಿಡುಗಡೆಯಾದ ಹಣ

687 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ನೀರಿನ ಅಭಾವವಿದ್ದಾಗ ಬರಗಾಲ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಿದ ಅನುದಾನವೆಷ್ಟು?*

ಆ) *ಈ ಹಣದಿಂದ ಎಷ್ಟು ಬೋರ್‌ವೆಲ್‌ಗಳನ್ನು ಹಾಕಲಾಗಿದೆ?*

ಇ) *ಈ ಹಣ ಸರಿಯಾಗಿ ವಿನಿಯೋಗವಾಗಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) 1996-97ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಸಭೆ ವ್ಯಾಪ್ತಿಯ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೂ. 30.00 ಲಕ್ಷಗಳ ಅನುದಾನ ಒದಗಿಸಲಾಗಿತ್ತು.

ಆ) 74 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ.

ಇ) ಹಣ ಸರಿಯಾಗಿ ವಿನಿಯೋಗವಾದ ಬಗ್ಗೆ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆ ಇವರು ರೂ. 26.04 ಲಕ್ಷಗಳ ಬಳಕೆ ಪ್ರಮಾಣಪತ್ರ ನೀಡಿದ್ದಾರೆ.

ಈ) ಉದ್ಭವಿಸುವುದಿಲ್ಲ.

ವಿವಿಧ ಇಲಾಖೆಗಳಿಂದ ಸಮಾಜ ಕಲ್ಯಾಣ ಇಲಾಖೆಗೆ ಹಣವನ್ನು ನೀಡುವುದು

688 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ಯಾವ ಯಾವ ಇಲಾಖೆಗಳಿಂದ ಎಷ್ಟು ಹಣವನ್ನು ಕೂಡಿಸಿ ಸಮಾಜ ಕಲ್ಯಾಣ ಇಲಾಖೆಗೆ ಕೊಡಲು ನಿರ್ಣಯಿಸಲಾಗಿತ್ತು. 31-3-1998ರ ವರೆಗೆ ಕೂಡಿಸಿಕೊಟ್ಟ ಹಣವೆಷ್ಟು?*

ಆ) *ಅದರಲ್ಲಿ 31-3-98 ವರೆಗೆ ಖರ್ಚು ಮಾಡಿದ ಹಣವೆಷ್ಟು?*

ಇ) *ಯಾವ ಯಾವ ಕೆಲಸಕ್ಕೆ ಖರ್ಚು ಮಾಡಲಾಗಿದೆ?*

ಈ) *1998-99ರಲ್ಲಿ ಎಷ್ಟು ಹಣ ಯಾವ ಯಾವ ಇಲಾಖೆಯಿಂದ ಕೂಡಿಸಿ ಸಮಾಜ ಕಲ್ಯಾಣ ಇಲಾಖೆಗೆ ಕೊಡಲು ನಿರ್ಧರಿಸಲಾಗಿದೆ?*

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ವಿಶೇಷ ಘಟಕ ಯೋಜನೆಯಡಿ ರೂ. 7004.00 ಲಕ್ಷಗಳು ಹಾಗೂ ಗಿರಿಜನ ಉಪಯೋಜನೆಯಡಿ ರೂ.1454.00 ಲಕ್ಷಗಳನ್ನು ಕ್ರೋಢಿಕರಿಸಲು ನಿರ್ಧರಿಸಲಾಗಿತ್ತು. (ಇಲಾಖೆಗಳ ವಿವರಗಳನ್ನು ಅನುಬಂಧ-1ರಲ್ಲಿ ಮಾಹಿತಿಯೊಂದಿಗೆ ನೀಡಲಾಗಿದೆ). ದಿನಾಂಕ 31-3-98ರವರೆಗೆ ಕೂಡಿಸಿ ಕೊಟ್ಟ ಹಣ :

ವಿಶೇಷ ಘಟಕ ಯೋಜನೆ	ರೂ. 6029.00 ಲಕ್ಷ
ಗಿರಿಜನ ಉಪ ಯೋಜನೆ	ರೂ. 1154.00 ಲಕ್ಷ

ಆ) ಅನುಬಂಧ -2ರಲ್ಲಿ ವಿವರವಾದ ಮಾಹಿತಿಯನ್ನು ಒದಗಿಸಲಾಗಿದೆ.

ಇ) ಅನುಬಂಧ-2ರಲ್ಲಿ ಕಾರ್ಯಕ್ರಮಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.

ಈ) ಅನುಬಂಧ-3ರಲ್ಲಿ ಮಾಹಿತಿ ಒದಗಿಸಲಾಗಿದೆ.

ಅನುಬಂಧ -1

1997-98ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ ಒಟ್ಟುಗೂಡಿಸಿ ವಿವರ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವಿಧ ಇಲಾಖೆಗಳ ಹೆಸರು	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ
1	2	3	4
1.	ಕೃಷಿ	400.00	50.00
2.	ತೋಟಗಾರಿಕೆ	150.00	25.00
3.	ಭೂ ಸಾರ ಸಂರಕ್ಷಣೆ	500.00	100.00
4.	ಪಶು ಸಂಗೋಪನೆ	130.00	30.00
5.	ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ	65.00	15.00

1	2	3	4
6.	ಮೀನುಗಾರಿಕೆ	50.00	-
7.	ಅರಣ್ಯ	200.00	30.00
8.	ಸಹಕಾರ	150.00	-
9.	ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ	-	80.00
10.	ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ	440.00	128.00
11.	ಗಡಿ ಪ್ರದೇಶಾಭಿವೃದ್ಧಿ ಮಂಡಳಿ	300.00	75.00
12.	ಸಣ್ಣ ನೀರಾವರಿ``	1800.00	450.00
13.	ಗಣಿ ಮತ್ತು ಭೂ ವಿಜ್ಞಾನ	49.00	13.00
14.	ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ	300.00	-
15.	ಕಾಡಾ	500.00	100.00
16.	ಗ್ರಾಮೀಣ ಕೈಗಾರಿಕೆ ಮತ್ತು ವಿಶ್ವ	600.00	200.00
17.	ರೇಷ್ಮೆ	150.00	50.00
18.	ಕೈಮಗ್ಗ	100.00	25.00
19.	ಭಾರಿ ಮತ್ತು ಮಧ್ಯಮ ಕೈಗಾರಿಕೆ	190.00	50.00
20.	ಕನ್ನಡ ಮತ್ತು ಸಂಸ್ಕೃತಿ	50.00	10.00
21.	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	500.00	-
22.	ಪುರಸಭೆಗಳಿಗೆ ಅನುದಾನ	300.00	-
23.	ವಾರ್ತಾ ಮತ್ತು ಪ್ರಚಾರ ಇಲಾಖೆ	50.00	15.00
24.	ಅಂಗವಿಕಲರ ಕಲ್ಯಾಣ	30.00	8.00
	ಒಟ್ಟು	**7004.00**	**1454.00**

ಅನುಬಂಧ - 2

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮಗಳು	ವಿಶೇಷ ಘಟಕ ಯೋಜನೆ		ಗಿರಿಜನ ಉಪಯೋಜನೆ	
		ಬಿಡುಗಡೆಯಾದ ಹಣ	ಖರ್ಚಾದ ಹಣ	ಬಿಡುಗಡೆಯಾದ ಹಣ	ಖರ್ಚಾದ ಹಣ
1	2	3	4	5	6
1.	1996-97ನೇ ಸಾಲಿನ ಕೊರತೆಯಾದ ಅಂಬೇಡ್ಕರ್ ಮನೆ ನಿರ್ಮಾಣಕ್ಕಾಗಿ	1000.00	1000.00	-	-
2.	1997-98ನೇ ಸಾಲಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅಂಬೇಡ್ಕರ್ ಮನೆಗಳ ನಿರ್ಮಾಣ	1700.00	*1700.00	457.30	*457.30
3.	ನಗರ ಪ್ರದೇಶಗಳಲ್ಲಿ 97-98ನೇ ಸಾಲಿನಲ್ಲಿ ಅಂಬೇಡ್ಕರ್ ಮನೆಗಳ ನಿರ್ಮಾಣ	600.00	*600.00	200.00	*200.00
4.	96-97ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿ 5000 ಸಹಾಯ ಧನ	525.00	525.00	-	-
5.	ಆಶ್ರಯ ಮನೆಗಳಿಗೆ ಸಹಾಯಧನ	-	-	216.70	216.70
6.	ಗ್ರಾಮೀಣ ವಸತಿ	50.00	50.00	25.00	25.00
7.	ಗಂಗಾ ಕಲ್ಯಾಣ ಯೋಜನೆ	1000.00	1000.00	30.00	30.00
8.	ಮುರಾರ್ಜಿ ದೇಸಾಯಿ ಶಾಲೆಗಳ ನಿರ್ಮಾಣ	700.00	700.00	-	-
9.	ಪ್ರೌಢಶಾಲೆಗಳಿಗೆ ಹೋಗುವ ಬಾಲಕಿಯರಿಗೆ ಪ್ರೋತ್ಸಾಹ ಧನ	304.00	304.00	25.00	25.00
10.	ಬೆಂಗಳೂರಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣ	150.00	150.00	-	-
11.	ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಪ್ರದೇಶಗಳಲ್ಲಿ ಗಿರಿಜನರಿಗೆ ವಸತಿ ಕಾರ್ಯಕ್ರಮ (96-97ನೇ ಸಾಲಿನ ಬಾಕಿ)	-	-	200.00	200.00
		6029.00	**6029.00**	**1154.00**	**1154.00**

* ಅಂಬೇಡ್ಕರ್ ವಸತಿ ಯೋಜನೆಯಡಿ ಮನೆಗಳ ನಿರ್ಮಾಣ ಪ್ರಗತಿಯನ್ನು ಪರಿಶೀಲಿಸಿ ಬಿಡುಗಡೆ ಮಾಡುವ ಉದ್ದೇಶದಿಂದ ಪಿ.ಡಿ.ಖಾತೆಗೆ ಜಮಾ ಮಾಡಲಾಗಿದೆ.

ಅನುಬಂಧ - 3

1998-99ರಲ್ಲಿ ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆಗಳಡಿ ಒಟ್ಟುಗೂಡಿಸಿರುವ ಹಣದ ವಿವರ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವಿಧ ಇಲಾಖೆಗಳ ಹೆಸರು	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ
1	2	3	4
1.	ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ	400.00	100.00
2.	ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ	720.00	180.00
3.	ಗಡಿ ಪ್ರದೇಶಾಭಿವೃದ್ಧಿ	248.00	62.00
4.	ಅಚ್ಚುಕಟ್ಟ ಪ್ರದೇಶಾಭಿವೃದ್ಧಿ ಕಾಡಾ	400.00	75.00
5.	ಸಣ್ಣ ನೀರಾವರಿ ಮೇಲ್ಮೈಜಲ	2000.00	400.00
6.	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	500.00	
	ಒಟ್ಟು	**4268.00**	**817.00**

ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಯೋಜನೆಗಳು

689 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದವರು ಹಾಕಿಕೊಂಡಿದ್ದ ಯೋಜನೆಗಳು ಯಾವುವು?*

ಆ) *ಅವುಗಳ ಆರ್ಥಿಕ ಮತ್ತು ಭೌತಿಕವಾಗಿ ಸಾಧಿಸಿದ ಗುರಿಯೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)*

ಇ) *1998-99ನೇ ಸಾಲಿನಲ್ಲಿ ಹಾಕಿಕೊಂಡ ಯೋಜನೆಗಳ ಜಿಲ್ಲಾವಾರು ವಿವರ ನೀಡುವುದು?*

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು 1998 ರ ಸಾಲಿಗೆ